ಲಿಂಗಯ್ಯ ಕಾಲುದಾರಿಯಲ್ಲಿ ನಡೆದು ಹೋಗುವಾಗೆಲ್ಲ ಯಾಕೆ ತಿರುಗಿ ನೋಡುತ್ತಿದ್ದ ಅನ್ನುವುದು ಒಂದು ಒಗಟು ಊರಿಗೆ ಒಗಟಾಗಿಯೇ ಉಳಿದುಹೋಯಿತು. ಲಿಂಗಯ್ಯ ತೀರಿಕೊಂಡ ದಿನ ರಾತ್ರಿ ತುಂಬ ಜೋರು ಮಳೆ. ಆ ಮಳೆಯಲ್ಲಿ ಅವನು ತಿರುಗಿ ನೋಡಿದ ಗಿಡಗಳೆಲ್ಲ ನೀರಿಗೆ ಒದ್ದೆಯಾಗಿ ಮಿಡುಕುತ್ತಿದ್ದವು, ಅವನನ್ನು ಸುಡಲು ತಂದ ಕಟ್ಟಿಗೆಗಳನ್ನೂ ಅವನು ಮುಟ್ಟಿದ್ದನೋ ಎನ್ನುವಂತೆ ಬೆಂಕಿ ಹೊತ್ತಿಕೊಳ್ಳದೇ ಮೆದುವಾಗಿ ಮಿಡುಕಿದಂತೆ ಕಾಣಿಸಿದ್ದವು.

ಲಿಂಗಯ್ಯ, ಬಸಯ್ಯನ ಹಟ್ಟಿಯ ನೆಲವನ್ನು ಚೆನ್ನಾಗಿ ಬಳಿದು ಮಣ್ಣಿನ ಮನೆ ಮಾಡಿಕೊಂಡು ವಾಸ ಮಾಡುತ್ತಿದ್ದ. ಅವನ ನೆಲ ಬಳಿದೂ ಬಳಿದೂ ಎಷ್ಟು ನಯಸ್ಸಾಗಿತ್ತೆಂದರೆ ಯಾವ ರೆಡ್ಡಾಕ್ಸೈಡ್ ನೆಲವೂ ಅಷ್ಟು ಹೊಳಪು ಇದ್ದಿರಲಿಕ್ಕಿಲ್ಲ. ಬೆಳಿಗ್ಗೆ ಬೇಗ ಎದ್ದು ನೆಲ, ಗೋಡೆ, ಅಂಗಳವನ್ನೆಲ್ಲ ಚೆನ್ನಾಗಿ ಸೆಗಣಿಯಿಂದ ಬಳಿದು ಮಡಿಕೆ ಮಾಡುವುದಕ್ಕೆ ಕೂರುತ್ತಿದ್ದ ಲಿಂಗಯ್ಯನಿಗೆ ಒಂದು ಕೆಟ್ಟ ಅಭ್ಯಾಸವೆಂದರೆ ಜೋರಾಗಿ ಕೂಗುವುದು. ಅವನ ಧ್ವನಿ ಎಷ್ಟು ಕಠೋರವೂ ಕರ್ಕಶವೂ ಆಗಿತ್ತೆಂದರೆ ಆ ಕಡೆ ಯಾರಾದರೂ ಹೊಸಬರು ಬಂದಿದ್ದೇ



ಹೌದಾದರೆ ಅದೇನು ಪ್ರಾಣಿಯೋ ದೆವ್ವವೋ ಅಂತ ಹೆದರುವುದೇ. ಅವನು ಅದನ್ನು ಹಾಡೆಂದು ಕರೆಯುತ್ತಿದ್ದ, ಅದ್ಯಾವುದೋ ಅರ್ಥವಾಗದ ಭಾಷೆಯ ಪದ ಆಗಿರುತ್ತಿತ್ತದು. ಅವನ ಹಾಡು ತಾರಕಕ್ಕೆ ಹೋಗುತ್ತ ಹೋಗುತ್ತ ಅವನ ಕೈಯಲ್ಲಿ ಮಡಕೆ ಚಕಚಕನೆ ತಯಾರಾಗುತ್ತಿದ್ದವು. ಮಧ್ಯೆ ಮಧ್ಯೆ ಆರೆಂಟು ಲೀಟರು ತಿಳಿನೀರು, ಮಧ್ಯಾಹ್ನ ಒಂದು ಉಂಡೆಗಡುಬು, ಸೊಪ್ಪಿನ ಸಾರು, ಒಂದರೆಗಳಿಗೆ ನಿದ್ದೆ ಮತ್ತು ಹೊತ್ತು ಕಂತುವತನಕ ಕೆಲಸ, ಆಮೇಲೆ ಬುಡ್ಡಿ ದೀಪದಲ್ಲಿ ಅವನ ಊಟ ಮುಗಿದು ಬಹಳ ಬೇಗ ನಿದ್ದೆಗೆ ಜಾರುತ್ತಿದ್ದ. ನಿದ್ದೆ ಹೋದಮೇಲೆ ಜಪ್ಪಯ್ಯ ಎಂದರೂ ಅವನಿಗೆ ಎಚ್ಚರವಾಗುತ್ತಿರಲಿಲ್ಲ. 'ಆ ಕಾಡಲ್ಲಿ ಒಬ್ಬನೇ ಮಲಗ್ತೀಯಲ್ಲ, ದೆಯ್ಯ ಗಿಯ್ಯ ಮೆಟ್ಟಕಲನಾ' ಅಂತ ಯಾರಾದರೂ ಕೇಳಿದರೆ ಪಕಪಕನೆ ನಕ್ಕುಬಿಡುತ್ತಿದ್ದ ಲಿಂಗಯ್ಯ ಒಳಗೇ ಇಟ್ಟುಕೊಂಡಿರಬಹುದಾಗಿದ್ದ ದೆವ್ವ, ಪ್ರಾಣಿ, ಪೀಡಗಳ ಕತೆಯನ್ನು ತಪ್ಪಿಯೂ ಬಾಯಿಬಿಡುತ್ತಿಲ್ಲ. ಅವನು ಹಸ್ರೊಳ್ಳಿ ಅಂಗಡಿಗೆ ಹೋಗಿ, ಒಂದರ್ಧ ಗಂಟೆ ಕೂತು, ಅಕ್ಕಿ ತುಂಬಿಕೊಡುವಷ್ಟರಲ್ಲಿ ಕೆಲವರು ಅವನ ಜಗತ್ತನ್ನು ಬೆದಕಲು ನೋಡುತ್ತಿದ್ದರು. ಆದರೆ ಲಿಂಗಯ್ಯ ತಪ್ಪಿಯೂ ಬಾಯಿ ಬಿಡುತ್ತಿರಲಿಲ್ಲ.

ಲಿಂಗಯ್ಯನ ಬಗ್ಗೆ ಸುತ್ತ ಹತ್ತು ಊರಿಗೆ ಕುತೂಹಲ ಇರುವುದಕ್ಕೆ ಎರಡು ಕಾರಣಗಳಿದ್ದವು. ಒಂದು ಅವನ ಓಡಿಹೋದ ಹೆಂಡತಿಯಾದರೆ, ಇನ್ನೊಂದು ಅವನು ದುಡಿದೂ ದುಡಿದೂ ಮನೆ ಸುತ್ತ ಮಾಡಿಟ್ಟುಕೊಂಡ ಜಮೀನು. ಬಹಳಷ್ಟು ತರಕಾರಿಗಳನ್ನು ಬೆಳೆದಿದ್ದ, ಅಡಿಕೆ ಹಾಕಿದ್ದ, ತೆಂಗು ಹಾಕಿದ್ದ, ಚಿಕ್ಕೂ ಹಾಕಿದ್ದ, ಮಡಿಕೆಗಳನ್ನು ಸಂತೆಗೆ ಹೋಗಿ ಮಾರಾಟ ಮಾಡುತ್ತಿದ್ದ, ಅದ್ಯಾವ ಮಾಯದಲ್ಲೋ ತೋಟದ ವಾಗಾಯ್ತಿ ಮಾಡುತ್ತಿದ್ದ. ಅವನ ಪೆಟ್ಟಿಗೆಯಲ್ಲಿ ಎಷ್ಟು ದುಡ್ಡಿವೆ, ಅದನ್ನು ಕಾಪಾಡುವ ಲಿಂಗಯ್ಯನ ಕುಡುಗೋಲು ಎಷ್ಟು ಮೊನಚಾಗಿವೆ ಅಂತ ಎಲ್ಲರಿಗೂ ಅಚ್ಚರಿ, ಕುತೂಹಲ ಇದ್ದೇ ಇತ್ತು. ಅದಕ್ಕೆ ಕಲಶವಿಟ್ಟಂತೆ ಓಡಿ ಹೋದ ಹೆಂಡತಿಯ ಸೌಂದರ್ಯ, ಯೌವನ ಮತ್ತು ಅವಳು ಗಂಡನಿಗೆ ದ್ರೋಹ ಮಾಡಿ ಓಡಿ ಹೋದ ಗಂಡಸಿನ ಬಡತನ.

ಲಿಂಗಯ್ಯ ಮದುವೆಯಾಗಿದ್ದು ಹಿರೇಕೆರೂರು ಕಡೆಯ ಹುಡುಗಿಯನ್ನ. ಅವನಿಗೆ ಅವಳು ದೂರದಿಂದ ನೆಂಟಳೇ. ಹಾಗೇ ಅವರ ಸಂಬಂಧವನ್ನು ಯಾರೋ ಕೂಡಿಸಿ ಕೊಟ್ಟಿದ್ದರು. ತಂದೆ, ತಾಯಂದಿರನ್ನು ಬಾಲ್ಯದಲ್ಲೇ ಕಳಕೊಂಡಿದ್ದ ಲಿಂಗಯ್ಯ ಮನೆಗೆ ಬರುವ ರತ್ನಳಿಗೋಸ್ಕರ ಚಿನ್ನ, ಒಡವೆ ಮಾಡಿಸಿಟ್ಟಿದ್ದ. ಕಷ್ಟವಾಗಬಾರದು ಅಂತ ಹೊಸ ಬಿಂದಿಗೆ ತಂದಿದ್ದ, ತಾನೇ ವರ್ಷಗಟ್ಟಲೆ ಹಿತ್ತಲಲ್ಲಿ ಅಗೆದು ತಿಳಿನೀರಿನ ಬಾವಿ ಮಾಡಿದ್ದ. ರತ್ನ ಅವನ ಮನೆಗೆ ಹೊಕ್ಕಾಗ ಆ ಕತ್ತಲೆ, ಆ ಕಾಡು, ಆ ರಾತ್ರಿಯ ವಿಚಿತ್ರ ಸದ್ದು ಭಯ ಪಡಿಸಿದರೂ ಲಿಂಗಯ್ಯನ ಅಪ್ಪುಗೆ, ಲಿಂಗಯ್ಯನ ಸಾಹಚರ್ಯೆ ಅದೇನೋ ಉನ್ಮತ್ತತೆಯನ್ನು ಕೊಟ್ಟಿತ್ತು. ಕ್ರಮೇಣ ಅವನ ಕೆಲಸಕ್ಕೆ ರತ್ನಳ ಬೆಂಬಲವೂ ದೊರೆತಿತು, ಅವನ ಮೌನಕ್ಕೆ ಅವಳು ಮಾತು ಎರೆಯುತ್ತಿದ್ದಳು, ಅವನ ತೋಟಕ್ಕೆ ಸೆಗಣಿಗೊಬ್ಬರ ಇಡುತ್ತಿದ್ದಳು, ತನಗೆ ತೋಚಿದ್ದನ್ನು ಮೆಲುದನಿಯಲ್ಲಿ ರಾಗವಾಗಿ ಹಾಡುತ್ತಿದ್ದಳು.

ಆದರೆ ಅದೇಕೋ ಗೊತ್ತಿಲ್ಲ, ಲಿಂಗಯ್ಯನ ಆ ತೋಟ, ಅವಳಿಗಾಗಿ ಇಟ್ಟ ಒಡವೆ, ವಸ್ತ್ರ, ಎಲ್ಲೇ ಹೋದರೂ ಅವಳಿಗೆ ಅಂತ ತಂದುಕೊಡುತ್ತಿದ್ದ ಹೊಸ ಹೊಸ ಪರಿಕರಗಳು ಅವಳಿಗೆ ಯಾಕೋ ಬೇಡವೆನ್ನಿಸಲು ಪ್ರಾರಂಭವಾದವು. ಅವನ ಜತೆ ಜಗಳ ಆಡುವಳು, ಅವಳೇ ದುರುದುರು ಹೋಗಿ ಕಾಡಲ್ಲಿ ರಾತ್ರಿಯೆಲ್ಲ ಕೂತುಬಿಡುವಳು, ಒಬ್ಬಳೇ ಅಳುವಳು, ನೆಂಟರು ಬಂದರೆ ಬಹಳ ಸಂತಸದಿಂದ ಮಾತಾಡುವಳು, ಮಕ್ಕಳ ಸುದ್ದಿ ತೆಗೆದರೆ ಎದ್ದು ಹೋಗುವಳು, 'ಮಗು ಬೇಡ' ಅಂತ ಏಕಾಂತದಲ್ಲಿ ಕಿಟಾರನೆ ಕಿರುಚಿ ಅಳುವಳು, ಮನಸ್ಸಿದ್ದರೆ ನಾಲ್ಕಾರು ಬಗೆಯ ಪದಾರ್ಥ ಮಾಡುವಳು, ಬೇಡವೆಂದರೆ ಎರಡು ದಿನಗಟ್ಟಲೆ ತಮ್ಮೆರಡು ಹೊಟ್ಟೆಗಳನ್ನು ಉಪವಾಸ ಕೆಡವುವಳು.

ಒಂದು ದಿನ ಅಕ್ಕಿ ಮೂಟೆ ಹಾಕಲು ಬಂದನಂತೆ ಕೂಲಿಯಾಳು. ಅವನು ಆಚೆ ಹೋಗುತ್ತಲೇ ಅವಳೂ ಅವನ ಹಿಂದೆ ಹೋಗಿ ಕತ್ತಲಕಾನು ಕ್ರಾಸು ಸ್ಟಾಪಿನಿಂದ ಬಸ್ಸು ಹತ್ತಿದಳು ಅಂತ ಮಾದಾರ ನಿಂಗಿ ಹೇಳಿದಳು.

ನಿಂಗಯ್ಯ ಅವಳನ್ನು ಹುಡುಕಿಸಲೂ ಹೋಗಲಿಲ್ಲ. ಒಂದಿಬ್ಬರು ಏನಾಯ್ತೆಂದು ಕೇಳಲು ಕನಿಕರಿಸಿ ಬಂದವರನ್ನು ಬೆಲ್ಲ, ನೀರು ಕೊಟ್ಟು ಕಳಿಸಿ ಮೌನವಾದ. ನಿಂಗಯ್ಯನ ಮನೆಯಲ್ಲಿ ಈಗಲೂ ಅವಳು ಬಿಟ್ಟು ಹೋದ ಬಳೆಗಳಿವೆ, ಅವಳ ಬಟ್ಟೆಗಳನ್ನು ಮೂಸಿದರೆ ಅವನ ಲೋಕಕ್ಕೆ ಮತ್ತೆ